ನದಿಕೊಳ್ಳಗಳಿಗೆ ಪಿಕಪ್ ಮತ್ತು ಬ್ಯಾರೇಜ್ ನಿರ್ಮಾಣ

903 (845); ಶ್ರೀ ಚೆಲುವರಾಯಸ್ವಾಮಿ ಎನ್

ಅ) ರಾಜ್ಯದಲ್ಲಿ ಅಂತರ್ಜಲ ಕುಸಿದಿರುವ ಗದಗ, ಬಿಜಾಪುರ, ಕೋಲಾರ, ಕೊಪ್ಪಳ, ಚಿಕ್ಕಬಳ್ಳಾಪುರ ಮೊದಲಾದ ಜಿಲ್ಲೆಗಳಲ್ಲಿ ನೈಸರ್ಗಿಕ ನದಿಕೊಳ್ಳಗಳಿಗೆ ಅಡ್ಡಲಾಗಿ ಸರಣಿಯಲ್ಲಿ ಪಿಕಪ್ ಮತ್ತು ಬ್ಯಾರೇಜ್‌ಗಳನ್ನು ನಿರ್ಮಿಸುವುದಾಗಿ 2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಈ ಬಗ್ಗೆ ಯಾವುದಾದರೂ ಯೋಜನೆ ತಯಾರಿಸಲಾಗಿದೆಯೇ; ಈ ಕಾರ್ಯಕ್ರಮಕ್ಕೆ ಒದಗಿಸಿರುವ ಆಯವ್ಯಯ ಎಷ್ಟು; ಈ ಯೋಜನೆಯ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು);

ಇ) ಈ ಯೋಜನೆಗೆ ಅಂತರ್ಜಲ ಗಣನೀಯ ಪ್ರಮಾಣದಲ್ಲಿ ಕುಸಿದಿರುವ ಮಂಡ್ಯ, ಮೈಸೂರು, ತುಮಕೂರು, ಚಾಮರಾಜನಗರ, ಚಿತ್ರದುರ್ಗ ಜಿಲ್ಲೆಗಳನ್ನೂ ಕೂಡ ಸೇರಿಸಲು ಕ್ರಮ ಕೈಗೊಳ್ಳಲಾಗುವುದೇ;

ಈ) ಮಂಡ್ಯ ಜಿಲ್ಲೆಯಲ್ಲಿ ಹೇಮಾವತಿ, ಲೋಕಪಾವನಿ, ವೀರವೈಷ್ಣವಿ, ಶಿಂಷಾ, ಕಾವೇರಿ ಮೊದಲಾದ ನದಿಗಳು ಅನೇಕ ದೊಡ್ಡ ದೊಡ್ಡ ತೊರೆಗಳಿದ್ದು, ಇವುಗಳಿಗೆ ಹೊಸದಾಗಿ ಬ್ಯಾರೇಜ್‌ಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಮತ್ತು ಆ) 2014–15ನೇ ಸಾಲಿನ ಆಯವ್ಯಯ ಘೋಷಣೆಯಂತೆ ಅಂತರ್ಜಲ ಕುಸಿದಿರುವ ಜಿಲ್ಲೆಗಳಾದ ಗದಗ, ವಿಜಯಪುರ, ಕೋಲಾರ ಕೊಪ್ಪಳ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನೈಸರ್ಗಿಕ ನದಿಕೊಳ್ಳಗಳಿಗೆ ಅಡ್ಡಲಾಗಿ ಸರಣಿಯಲ್ಲಿ ಪಿಕಪ್‌ಗಳನ್ನು ನಿರ್ಮಿಸುವ

ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ 4702–ಅಣೆಕಟ್ಟುಗಳು ಪ್ರಧಾನ ಕಾಮಗಾರಿಗಳು ಅಡಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಆಯವ್ಯಯ ಘೋಷಣೆಯಂತೆ ಕ್ರಮ ಕೈಗೊಳ್ಳಲು ಒಟ್ಟು ₹ 32413.00 ಲಕ್ಷ ಅಂದಾಜು ಮೊತ್ತದ 684 ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲು ಅಂದಾಜು ಮೊತ್ತದ ಮೂರನೇ ಒಂದು ಭಾಗದಂತೆ ₹ 10804.33 ಲಕ್ಷ ಹೆಚ್ಚುವರಿ ಅನುದಾನ ಅವಶ್ಯವಿರುತ್ತದೆ. 2014–15ನೇ ಸಾಲಿನ ಆಯವ್ಯಯದಲ್ಲಿ 4702–ಅಣೆಕಟ್ಟುಗಳು ಪ್ರಧಾನ ಕಾಮಗಾರಿಗಳು ಅಡಿ ₹ 6785.64 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಹೆಚ್ಚುವರಿ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯು ಹೆಚ್ಚುವರಿ ಅನುದಾನವನ್ನು ಒದಗಿಸಿದ ನಂತರ ಆಯವ್ಯಯ ಘೋಷಣೆಯಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಇ) 2014–15ನೇ ಸಾಲಿನಲ್ಲಿ ಮಂಡ್ಯ ಮೈಸೂರು, ತುಮಕೂರು, ಚಾಮರಾಜನಗರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಯಾವುದೇ ಯೋಜನೆಗಳನ್ನು ಕೈಗೊಂಡಿರುವುದಿಲ್ಲ.

ಈ) ಇಂತಹ ಯಾವುದೇ ಪ್ರಸ್ತಾವನೆಗಳು ಸಣ್ಣ ನೀರಾವರಿ ಇಲಾಖೆಯಲ್ಲಿ ಇರುವುದಿಲ್ಲ.

ಮಿನಿ ವಿಧಾನ ಸೌಧದ ವಿಸ್ತರಣೆ

904 (846); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ನಾಗಮಂಗಲ ಪಟ್ಟಣದ ತಾಲ್ಲೂಕು ಕಛೇರಿ (ಮಿನಿ ವಿಧಾನಸೌಧ) ಪಕ್ಕದಲ್ಲಿರುವ ಆರ್ಟಿಸಾನ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನ ಅನುಪಯುಕ್ತ ಹಳೆಯ ಕಟ್ಟಡವು ಅನೇಕ ವರ್ಷಗಳಿಂದ ಖಾಲಿ ಬಿದ್ದಿದ್ದು, ಜೀರ್ಣಾವಸ್ಥೆಗೆ ತಲುಪಿರುವ ಕಾರಣ ಇದನ್ನು ಕಂದಾಯ ಇಲಾಖೆಯ